**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧೀಕಾರಿಗಳು,**

**ಕಿತ್ತೂರ ಇವರ ನ್ಯಾಯಾಲಯದಲ್ಲಿ.**

**CC 3085/2023**

| | | |
|---|---|---|
| **ಸಾಕ್ಷಿದಾರರ ಹೆಸರು** | - ಮನೀಷ ದತ್ತು ದುಮಾಡೆ | **DW-01** |
| **ವಯಸ್ಸು** | - 45 ವರ್ಷ | |
| **ಉದ್ಯೋಗ** | - ವ್ಯವಸ್ಥಾಪಕರು, SBI, Kittur | |
| **ವಾಸ** | - ಧಾರವಾಡ | |

**ದಿಃ 10.04.2026 ರಂದು ಸಾಕ್ಷಿಗೆ ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ**

ನಾನು ದಿಃ 23.07.2023 ರಿಂದ ಇಲ್ಲಿಯವರೆಗೆ SBI ಕಿತ್ತೂರ ಶಾಖೆಯಲ್ಲಿ ವ್ಯವಸ್ಥಾಕರು ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದ ಪಿರ್ಯಾದಿಯ ಖಾತೆಯು ನಮ್ಮ ಶಾಖೆಯಲ್ಲಿರುತ್ತದೆ. ಪಿರ್ಯಾದಿಯು ಈ ಪ್ರಕಣದಲ್ಲಿರುವ ನಿಪಿ 1 ರಂತೆ ಇರುವ ಚೆಕ್ ನ್ನು ಆಗಸ್ಟ್ 2023 ರಲ್ಲಿ ತಮ್ಮ ಖಾತೆಗೆ ನಗದೀಕರಣ ಮಾಡಿಕೊಳ್ಳಲು ಸಲ್ಲಿಸಿರುತ್ತಾರೆ. ನಂತರ ನಾವು ಸದರಿ ಚೆಕ್ ಇರುವ ಖಾತೆಯನ್ನು ಪರೀಶೀಲನೆ ಮಾಡಿ ಸದರಿ ಚೆಕ್ ನಲ್ಲಿರುವ ಖಾತೆದಾರನ ಸಹಿಯು ಹೊಂದಾಣಿಕೆ ಆಗುತ್ತಿಲ್ಲ ಎಂದು ಹಿಂಬರಹವನ್ನು ಪಿರ್ಯಾದಿಗೆ ನೀಡಿರುತ್ತೇವೆ. ಆದರೆ ಸದರಿ ಹಿಂಬರಹದ ಪ್ರತಿಯನ್ನು ನಮ್ಮ ಶಾಖೆಯಲ್ಲಿ ಇಟ್ಟುಕೊಂಡಿರುವುದಿಲ್ಲ. ಸಾಕ್ಷಿಯು ನಿಪಿ 2 ರಂತೆ ಹಿಂಬರಹವನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಈಗ ನಿಪಿ 2(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ 2 ನ್ನು ನಮ್ಮ ಶಾಖೆಯಿಂದಲೇ ನೀಡಿರುತ್ತೇವೆ.

ನಂತರ ದಿಃ 22.04.2024 ರಂದು ನಮ್ಮ ಶಾಖೆಗೆ ಆರೋಪಿತನಿಂದ RTI ರಡಿಯಲ್ಲಿ ಒಂದು ಅರ್ಜಿ ಸಲ್ಲಿಸಿರುತ್ತಾರೆ. ನಮ್ಮ ಶಾಖೆಗೆ ಯಾವುದೇ RTI ರಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಿದಾಗ ಅದಕ್ಕೆ ಹಿಂಬರಹಗಳನ್ನು ಹುಬ್ಬಳ್ಳಿಯಲ್ಲಿರುವ ನಮ್ಮ Reginal Office ನವರು ನೀಡುವುದರಿಂದ ನಾನು ಸದರಿ ಅರ್ಜಿಯನ್ನು ಪರೀಶೀಲನೆ ಮಾಡಿ ಸದರಿ ಅರ್ಜಿಯ ಮಾಹಿತಿಯನ್ನು ಮೌಖಿಕವಾಗಿ ನಮ್ಮ Reginal Office ಗೆ ತಿಳಿಸಿರುತ್ತೇನೆ. ನಾನು ನಿಪಿ 1 ಕ್ಕೆ ಸಂಬಂಧಿಸಿದಂತೆ ಯಾವುದೇ ಹಿಂಬರಹ ಇರುವುದಿಲ್ಲ ಎಂದು ನಮ್ಮ ಹುಬ್ಬಳ್ಳಿಯ office ಗೆ ತಿಳಿಸಿರುತ್ತೇನೆ. ಯಾವುದೇ ಒಂದು ಚೆಕ್ Funds insufficient ಎಂದು ಹಿಂಬರಹ ಕೊಟ್ಟರೆ ಮಾತ್ರ ನಮ್ಮ ಶಾಖೆಯ ಕಂಪ್ಯೂಟರ್ ಲ್ಲಿ ನಮೂದು ಇರುತ್ತದೆ ಆದರೆ ಸಹಿ ಹೊಂದಾಣಿಕೆ ಆಗದೇ ನಗದೀಕರಣ ಮಾಡದೇ ಹಿಂಬರಹ ನೀಡಿದ ಮಾಹಿತಿಯು ನಮ್ಮ ಶಾಖೆಯ ಕಂಪ್ಯೂಟರನಲ್ಲಿ ಇರುವುದಿಲ್ಲ. ಹಾಗಾಗಿ ನಿಪಿ 1 ಕ್ಕೆ ಸಂಬಂಧಿಸಿದ ಹಿಂಬರಹದ ಮಾಹಿತಿಯು ನಮ್ಮ ಶಾಖೆಯ ಕಂಪ್ಯೂಟರನಲ್ಲಿ ಸಿಗದೇ ಇರುವ ಕಾರಣ ಮಾಹಿತಿ ಇಲ್ಲ ಎಂದು ನಾನು ಹುಬ್ಬಳ್ಳಿ Office ಗೆ ಮೌಖಿಕವಾಗಿ ತಿಳಿಸಿರುತ್ತೇನೆ. ನಮ್ಮ ಶಾಖೆಯಲ್ಲಿರು ಸಿಸಿ ಟಿವಿ ಫೂಟೇಜ್ ಗಳು RBI ರವರ ಗೈಡಲೈನ್ಸ ಪ್ರಕಾರ 90 ದಿನಗಳ ನಂತರ Automatic delete ಆಗುತ್ತವೆ. ಹಾಗಾಗಿ ನಿಪಿ 1 ನ್ನು ನಗದೀಕರಣಕ್ಕೆ ಸಲ್ಲಿಸಿದ ದಿನಾಂಕದ ಯಾವುದೇ ಸಿಸಿ ಟಿವಿ ಫೂಟೇಜ್ ಗಳು ಇರುವುದಿಲ್ಲ. ಈಗ ಸುಮಾರು 5-6 ವರ್ಷಗಳ ಹಿಂದೆಯೇ ಆವಕ ಜಾವಕ ವಹಿಗಳನ್ನು ನಿರ್ವಹಣೆ ಮಾಡುವುದನ್ನು ರದ್ದು ಮಾಡಿರುತ್ತಾರೆ. ನಮ್ಮ ಶಾಖೆಯಿಂದ ಚೆಕ್ ನ್ನು ಯಾರು ನಗದೀಕರಣಕ್ಕಾಗಿ ಸಲ್ಲಿಸಿರುತ್ತಾರೆ ಸದರಿ ಖಾತೆದಾರರಿಗೆ ಮಾತ್ರ ಹಿಂಬರಹವನ್ನು ನೀಡುತ್ತೇವೆ ಹೋರತು ಚೆಕ್ ಖಾತೆದಾರರಿಗೆ ಯಾವುದೇ ಮಾಹಿತಿಯನ್ನು ನೀಡಲು ಅವಕಾಶ ಇರುವುದಿಲ್ಲ ಏಕೆಂದರೆ ಸದರಿ ಖಾತೆದಾರರ

ಮಾಹಿತಿಯು ನಮ್ಮ ಶಾಖೆಯಲ್ಲಿರುವುದಿಲ್ಲ.

**ಸಾಕ್ಷಿಯು RTI ಗೆ ಸಂಬಂಧಿಸಿದ ಅರ್ಜಿ ಹಾಗೂ ಇನ್ನಿತರೆ ದಾಖಲೆಗಳನ್ನು ಹಾಜರುಪಡಿಸಲು ಸಮಯವನ್ನು ಕೋರಿದ್ದು, ಆಲಸಿ ಸಮಯ ನೀಡಿ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

**ಓ ಹೇ ಕೇ ಸರಿ ಇದೆ**

**ಪ್ರ.ದ.ನ್ಯಾ.ದಂ. ಕಿತ್ತೂರು.**